# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 401(217)
ಸದಸ್ಯರ ಹೆಸರು : ಶ್ರೀ ಎನ್. ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ : 19.07.2019.
ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಲೋಕೋಪಯೋಗಿ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ನೈಸ್ ಸಂಸ್ಥೆಯೊಂದಿಗೆ ದಿನಾಂಕ 03.04.1997ರ ಕ್ರಿಯಾ ಒಪ್ಪಂದದಂತೆ ಎಲ್ಲಾ ಟೋಲ್ ರಸ್ತೆಗಳನ್ನು ಸಿಮೆಂಟ್ ಕಾಂಕ್ರೀಟ್ ರಸ್ತೆಯಾಗಿ ನಿರ್ಮಿಸಬೇಕಾಗಿದ್ದು, ಒಪ್ಪಂದ ಉಲ್ಲಂಘಿಸಿರುವ ಕಾರಣ ಯಾವ ಕ್ರಮಕೈಗೊಳ್ಳಲಾಗಿದೆ. | ನೈಸ್ ಸಂಸ್ಥೆಯೊಂದಿಗೆ ದಿನಾಂಕ 03.04.1997ರ ಕ್ರಿಯಾ ಒಪ್ಪಂದದ ಆರ್ಟಿಕಲ್ 16.2 ರಂತೆ ಡಿಫಾಲ್ಟ್ ನೋಟೀಸ್ ಅನ್ನು ದಿನಾಂಕ 5-2-2016 ರಂದು ಹೊರಡಿಸಲಾಗಿದೆ. ಆದರೆ ಸದರಿ ಡಿಫಾಲ್ಟ್ ನೋಟೀಸ್ ವಿರುದ್ಧ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂ. 12109-10/2016 ಅನ್ನು ದಾಖಲಿಸಿ ತಡೆಯಾಜ್ಞೆ ತಂದಿರುತ್ತಾರೆ. ಪ್ರಕರಣ ಬಾಕಿ ಇರುತ್ತದೆ. |
| (ಆ) | ನೈಸ್ ಸಂಸ್ಥೆಯೊಂದಿಗೆ ದಿನಾಂಕ 03.04.1997ರ ಕ್ರಿಯಾ ಒಪ್ಪಂದದಂತೆ ಕಾರ್ಯನಿರ್ವಹಿಸದಿರುವ ಕುರಿತು ಕ್ರಿಮಿನಲ್ ಪ್ರಕರಣ ದಾಖಲು ಮಾಡಲಾಗಿದೆಯೇ; ಒಪ್ಪಂದದಂತೆ ಕಾರ್ಯ ನಿರ್ವಹಿಸದಿರುವವರ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ; | ನೈಸ್ ಸಂಸ್ಥೆಯೊಂದಿಗೆ ದಿನಾಂಕ 03.04.1997ರ ಕ್ರಿಯಾ ಒಪ್ಪಂದದಂತೆ ಕಾರ್ಯನಿರ್ವಹಿಸದಿರುವ ಕುರಿತು ಕ್ರಿಮಿನಲ್ ಪ್ರಕರಣ ದಾಖಲು ಮಾಡಲಾಗಿರುವುದಿಲ್ಲ.<br><br>ಬೆಂಗಳೂರು-ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಯೋಜನೆಯಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳು ಹಾಗೂ ಕ್ರಿಯಾ ಒಪ್ಪಂದದ ಉಲ್ಲಂಘನೆಯ ಬಗ್ಗೆ ಆಗಿನ ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಸಣ್ಣನೀರಾವರಿ ಸಚಿವರ ಅಧ್ಯಕ್ಷತೆಯಲ್ಲಿ ರಚಿಸಲಾದ ಸದನ ಸಮಿತಿಯು ದಿನಾಂಕ 3-12-2016 ರಂದು ಸಲ್ಲಿಸಿದ ವರದಿಯಲ್ಲಿ ಶಿಫಾರಸ್ಸು ಮಾಡಲಾದಂತೆ ಕ್ರಮ ವಹಿಸುವ ಕುರಿತು ಈ ಕೆಳಕಂಡಂತೆ ಷರತ್ತು ವಿಧಿಸಿತ್ತು:<br><br>"ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಈ ವರದಿಯಲ್ಲಿ ಮಾಡಿರುವ ವಿಶ್ಲೇಷಣೆ, ಶಿಫಾರಸ್ಸು, ತೀರ್ಮಾನ ಹಾಗೂ ಅಭಿಪ್ರಾಯಗಳು, ಉಚ್ಚ ನ್ಯಾಯಾಲಯದ ಹಾಗೂ ಸರ್ವೋಚ್ಚ ನ್ಯಾಯಾಲಯದ ತೀರ್ಪು ಹಾಗೂ ಆದೇಶದ ನಿರ್ಬಂಧನೆಗಳಿಗೆ ಒಳಪಟ್ಟಿರುವುದು ಅತ್ಯವಶ್ಯಕ ಎಂದು ಸಮಿತಿಯು ತೀರ್ಮಾನಿಸುತ್ತದೆ. ತೆರವಾಗದ ತಡೆಯಾಜ್ಞೆಗಳು, ಮೇಲ್ಮನವಿಗಳು, ಮಧ್ಯಂತರ ಆದೇಶಗಳು ಹಾಗೂ ಇತ್ಯರ್ಥವಾಗದ: ಬಾಕಿ ಇರುವ ನ್ಯಾಯಾಂಗ ನಿಂದನೆಯ ಪ್ರಕರಣಗಳ ಅಂತಿಮ ತೀರ್ಪು ಹಾಗೂ ಆದೇಶಗಳ ನಿರ್ಬಂದನೆಗೆ ಈ ವರದಿ ಒಳಪಟ್ಟಿರುತ್ತದೆ".<br><br>ಮೆ: ನೈಸ್ ಸಂಸ್ಥೆಯು ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿ ಹಾಗೂ ಇತರೆ ಉನ್ನತ ಅಧಿಕಾರಿಗಳ ವಿರುದ್ಧ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ನಿಂದನಾ ಅರ್ಜಿ ಸಂ. 96:2007 ಅನ್ನು ದಾಖಲಿಸಿದ್ದು, ಸದರಿ ಪ್ರಕರಣ ಬಾಕಿ ಇದ್ದುದರಿಂದ ಹಾಗೂ ಕರ್ನಾಟಕ ಸರ್ಕಾರ ಮತ್ತು ಮೆ: ನೈಸ್ ಸಂಸ್ಥೆಯು ಮಧ್ಯೆ ಕ್ರಿಯಾ ಒಪ್ಪಂದಗಳ ಪರಿಣಾಮ |
| (ಇ) | ರಾಜ್ಯದ ಜನತೆಗೆ ಮೋಸ ಮಾಡಿರುವ ನೈಸ್ ಸಂಸ್ಥೆಯ ಮೇಲೆ ರಾಜದ್ರೋಹದ ಪ್ರಕರಣ ದಾಖಲಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ; ಈ ಕುರಿತು ಕ್ರಮ ಕೈಗೊಳ್ಳಲು ನಿರ್ಲಕ್ಷ ತೋರಿದ ಅಧಿಕಾರಿಗಳ ಮೇಲೆ ವಿಚಾರಣೆಗೆ ಆದೇಶ ನೀಡಲಾಗಿದೆಯೇ; | |

| | | |
|---|---|---|
| | | ಗಳು (implications) ಕುರಿತಂತೆ ವಿವಾದ ಇದ್ದು, ಈ ಸಂಬಂಧ ಹಲವಾರು ಪ್ರಕರಣಗಳು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಬಾಕಿ ಇರುವುದರಿಂದ, ಮೇಲಿನ ಸದನ ಸಮಿತಿಯು ಷರತ್ತಿನಂತೆ ಯಾವುದೇ ಕ್ರಮ ಕೈಗೊಳ್ಳಲು ಸಾಧ್ಯವಾಗಿರುವುದಿಲ್ಲ. |
| (ಈ) | ರಾಜ್ಯದ ಜನತೆಗೆ ಮೋಸ ಮಾಡಿದ ಬಳಿಕವೂ ಟೋಲ್ ಸಂಗ್ರಹಿಸುತ್ತಿರುವುದು ಅಕ್ಷಮ್ಯ ಅಪರಾಧವಾಗಿದ್ದು, ನೈಸ್ ರಸ್ತೆಯಲ್ಲಿ ಟೋಲ್ ಸಂಗ್ರಹವನ್ನು ನಿಲ್ಲಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ? | ಮೆ: ನೈಸ್ ಸಂಸ್ಥೆಯ ವಿರುದ್ಧ ಯಾವುದೇ ಕ್ರಮ ಕೈಗೊಳ್ಳಬೇಕಾಗದಲ್ಲಿ ದಿನಾಂಕ 3-4-1997ರ ಕ್ರಿಯಾ ಒಪ್ಪಂದದಲ್ಲಿ ವಿವರಿಸಿರುವ ವಿಧಿವಿಧಾನದಂತೆ ಕ್ರಮ ವಹಿಸಬೇಕಾಗಿರುತ್ತದೆ. ಅದರಂತೆ, ಟೋಲ್ ರಸ್ತೆ ಸೀಮೆಂಟ್ ರಸ್ತೆ ಮಾಡದೇ ಟೋಲ್ ವಸೂಲಿ ಮಾಡುತ್ತಿದ್ದು ಸೀಮೆಂಟ್ ರಸ್ತೆಯಾಗಿ ಪರಿವರ್ತಿಸುವಂತೆ ಡಿಫಾಲ್ಟ್ ನೋಟೀಸ್ ಅನ್ನು ದಿನಾಂಕ 5-2-2016 ರಂದು ಹೊರಡಿಸಿದ್ದು, ಈ ಸಂಬಂಧ ಪ್ರಕರಣ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಬಾಕಿ ಇರುವುದರಿಂದ, ಟೋಲ್ ಸಂಗ್ರಹ ನಿಲ್ಲಿಸಲು ಕ್ರಮ ವಹಿಸಲಾಗಿರುವುದಿಲ್ಲ. |

ಸಂಖ್ಯೆ: ಲೋಇ 51 ಸಿಆರ್‌ಎಂ 2019

(ಗೋವಿಂದ ಎಂ. ಕಾರಜೋಳ)
ಉಪ ಮುಖ್ಯ ಮಂತ್ರಿಗಳು ಹಾಗೂ
ಲೋಕೋಪಯೋಗಿ ಸಚಿವರು